ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ನ್ಯಾಯಾಲಯ, ಕೆ.ಆರ್.ನಗರ

**ಸಿ.ಸಿ. ನಂ.504/2015**

| | | |
|---|---|---|
| ಸಾಕ್ಷಿಯ ಹೆಸರು | ಕಾಳೇಗೌಡ | |
| ತಂದೆ / ಗಂಡ ಹೆಸರು | ಶೆಟ್ಟಿಗೌಡ | |
| ವಯಸ್ಸು | **81** | |
| ಉದ್ಯೋಗ | ನಿವೃತ್ತಿ ಶಿಕ್ಷಕರು | ಪ್ರಾಸಾ **9** |
| ವಾಸ ಸ್ಥಳ | ರಾಂಪುರ | ಚಾಸಾ **10** |

ಸಾಕ್ಷಿಗ ಪ್ರಮಾಣ ವಚನ ಬೋಧಿಸಲಾಯಿತು.

ದಿನಾಂಕ ಃ **13-03-2018.**

ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದಃ-

ನನಗೆ ಚಾಸಾ-**1** ರಿಂದ **4** ಗೊತ್ತು. ಆರೋಪಿತರು ಸಹ ನನಗೆ ಗೊತ್ತು, ನಮ್ಮ ಗ್ರಾಮದವರು. ಮೃತ ನಿಂಗಮ್ಮ ನನಗೆ ಗೊತ್ತು. ಚಾಸಾ-**1** ಮತ್ತು ಆರೋಪಿತರ ನಡುವೆ ಇರುವ ವಿವಾದ ನನಗೆ ಗೊತ್ತಿಲ್ಲ. ಆರೋಪಿತರ ಮತ್ತು ಚಾಸಾ-**1** ರಿಂದ **4** ರವರ ಮಧ್ಯೆ ನನ್ನ ಸಮಕ್ಷಮ ಯಾವುದೇ ಗಲಾಟೆಯಾಗಿರುವುದಿಲ್ಲ. ಮೃತ ನಿಂಗಮ್ಮನಿಗೆ ಯಾರು ಹೊಡೆದರು, ಏನು ಬೈದರೂ ಎಂದು ನನಗೆ ಗೊತ್ತಿಲ್ಲ. ಮೃತ ನಿಂಗಮ್ಮ ಹೇಗೆ ಸತ್ತರೂ ಎಂದು ನನಗೆ ಗೊತ್ತಿಲ್ಲ. ನಾನು ಜಗಳ ಬಿಡಿಸಿರುವುದಿಲ್ಲ. ನ್ಯಾಯಾಲಯದ ಮುಂದೆ ಇರುವ ಮು.ಮಾ.**1** ದೊಣ್ಣೆಯನ್ನು ಈ ಹಿಂದೆ ನೋಡಿರುವುದಿಲ್ಲ. ನಾನು ಪೋಲಿಸರಿಗೆ ಹೇಳಿಕೆ ನೀಡಿರುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೇನು ಗೊತ್ತಿಲ್ಲ.

ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಎಪಿಪಿರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.

ಪಾಟೀ ಸವಾಲುಃ ಮಾನ್ಯ ಎಪಿಪಿರವರಿಂದಃ-

ಪಿರ್ಯಾದುದಾರರು ಮತ್ತು ಆರೋಪಿತರ ನಡುವೆ ತಮ್ಮ ಮನೆಯ ಹಿತ್ತಲಿನ ಜಾಗದ ವಿಚಾರವಾಗಿ ಆಗಾಗ ಗಲಾಟೆಯಾಗುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ದಿನಾಂಕ **26-09-2014** ರಂದು ಸಂಜೆ **6.30** ಗಂಟೆಗೆ ನಾನು ಊರಿನಲ್ಲಿದ್ದಾಗ ಚಾಸಾ-**2** ಮತ್ತು **3** ಆರೋಪಿತರ ಮನೆಯ ಮುಂಭಾಗ ತಮ್ಮ ಹಿತ್ತಲಿಗೆ ಹೋಗುತ್ತಿದ್ದಾಗ, ಆರೋಪಿತರು ಇಲ್ಲಿ ಓಡಾಡಬೇಡಿ ಎಂದು ಅವಾಚ್ಯವಾಗಿ

ಬೈಯುತ್ತಿದ್ದಾಗ ಚಾಸಾ-1 ರಿಂದ 4 ರವರು ಯಾಕೆ ಜಗಳ ಮಾಡುತ್ತೀರಿ ಎಂದು ಆರೋಪಿತರನ್ನು ಕೇಳಿದಾಗ ಆರೋಪಿತರು ಬೋಳಿಮುಂಡೆರ, ಸೂಳೆಮುಂಡೇರ ಎಂದು ಅವಾಚ್ಯ ಶಬ್ಧಗಳಿಂದು ಬೈದು ತಳ್ಳಾಟ, ನೂಕಾಟ ಮಾಡಿ, ಆಗ ಮೃತ ನಿಂಗಮ್ಮ ಜಗಳ ಬಿಡಿಸಲು ಬಂದಾಗ ನಿಂಗಮ್ಮಳನ್ನು ಸ್ವಾಮಿಗೌಡ ನೀನ್ಯಾರು ಕೇಳುವುದಕ್ಕೆ ಎಂದು ಅವಾಚ್ಯ ಶಬ್ಧಗಳಿಂದ ಬೈದು, ಸುಕನ್ಯಾ ನಿಂಗಮ್ಮಳನ್ನು ಚಾಸಾ-1 ರಿಂದ 4 ರವರಿಗೆ ಸಪೋರ್ಟ್ ಮಾಡಲು ಬಂದಿದ್ದೀಯಾ ಎಂದು ಪಕ್ಕದಲ್ಲಿದ್ದ ಗೋಡೆ ಕಡೆ ನೂಕಿದಾಗ ನಿಂಗಮ್ಮನ ಕೈಯಲ್ಲಿದ್ದ ಊರುಗೋಲು ಕೆಳಕ್ಕೆ ಬಿದ್ದಿದ್ದು, ಆಗ ಮಂಜುನಾಥ ನಮ್ಮನ್ನೇ ಬೈಯುತ್ತೀಯಾ ಎಂದು ಮೃತ ನಿಂಗಮ್ಮನಿಗೆ ಊರುಗೋಲಿನಿಂದ ಎಡಗಾಲಿನ ತೊಡೆಗೆ ಹೊಡೆದು ತೀವ್ರ ಸ್ವರೂಪದ ಗಾಯವನ್ನುಂಟು ಮಾಡಿರುತ್ತಾನೆ ಎಂದರೆ ಸರಿಯಲ್ಲ. ನಾನು ಶೆಟ್ಟಿಗೌಡ, ರಾಜು, ಪ್ರತಾಪ್ ಇತರರು ಹೋಗಿ ಜಗಳ ಬಿಡಿಸಿರುತ್ತೇವೆ ಎಂದರೆ ಸರಿಯಲ್ಲ. ಆಗ ಮಂಜುನಾಥ ತನ್ನ ಕೈಯಲ್ಲಿದ್ದ ಊರುಗೋಲನ್ನು ಬೀಸಾಕಿರುತ್ತಾನೆ ಎಂದರೆ ಸರಿಯಲ್ಲ. ಆನಂತರ ಮೃತ ನಿಂಗಮ್ಮ ಆಸ್ಪತ್ರೆಗೆ ಸೇರಿದಾಗ ಆಕೆಯ ಕಾಲು ಮುರಿದಿತ್ತು ಎಂದು ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ದಿನಾಂಕ 2-10-20104 ರಂದು ಪೊಲಿಸರಿಗೆ ಈಗ ಓದಿ ಹೇಳಿದಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆಯನ್ನು ನಿಪಿ-8 ಎಂದು ಗುರುತಿಸಲಾಯಿತು. ಎಲ್ಲಾ ವಿಚಾರ ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲಾ ಎಂದು ಹೇಳಿರುತ್ತಾರೆ.

ಮರು ವಿಚಾರಣೆ-ಇಲ್ಲಾ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ.ಕೇ.ಸ.ಇ.ಒ.,

(ಶ್ರೀನಾಥ್.ಕೆ.)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.